


ಪಕ್ಕದ ಫ್ಲಾಟಿನ ಶ್ರೀನಿವಾಸಣ್ಣ ಬೆಳಿಗ್ಗೆ ಏಳರ ಹೊತ್ತಿಗೇ ಫೋನ್ ಮಾಡಿದರು. 'ಸರ್, ನಿಮ್ಮ ಹತ್ತಿರ ನನ್ನ ಮಗನ ಬಗ್ಗೆ ಮಾತನಾಡಬೇಕಿತ್ತು. ಎಷ್ಟು ಹೊತ್ತಿಗೆ ಫ್ರೀ ಇರ್ತೀರಿ?' ಅಂದರು. ಅವರ ಮಗ ರೋಹಿತ್ ಸರ್ಕಾರಿ ಬಾಲಕರ ಶಾಲೆಯ ವಿದ್ಯಾರ್ಥಿ. ನಾನಿರುವುದು ಖಾಸಗಿ ಪದವಿ ಪೂರ್ವ ಕಾಲೇಜಿನಲ್ಲಿ. ಅವನಿನ್ನೂ 9ನೇ ಕ್ಲಾಸ್‌ನಲ್ಲಿದ್ದಾನೆ, ಅವನ ಕುರಿತು ನನ್ನಲ್ಲೇನು ಮಾತನಾಡುವುದಿರಬಹುದು? ಎನ್ನುವ ಕುತೂಹಲದಿಂದಲೇ, 'ಆಯಿತು. 8ರ ಹೊತ್ತಿಗೆ ಬನ್ನಿ, ಅವನನ್ನೂ ಕರೆತನ್ನಿ' ಎಂದೆ.



ಅಪ್ಪ ಮಗ ಇಬ್ಬರೂ ಅರ್ಧ ಗಂಟೆ ಮುಂಚೆಯೇ ಬಂದರು. ಅಪ್ಪನ ಕೈಯಲ್ಲಿ ಬಳಸಿದ ಅರ್ಧ ಲೀಟರ್‌ನ ಕೋಕಾಕೋಲ ಪಾನೀಯದ ಕ್ಯಾನ್ ಇತ್ತು. ಬೆಳಗ್ಗೆಯೇ ಅದನ್ನು ಕೈಯಲ್ಲಿ ಹಿಡಿದು ಬಂದದ್ದು ನೋಡಿ – ಮಗ ಕೋಲ್ಡ್ ಡ್ರಿಂಕ್ ಕುಡಿಯುವ ಅಭ್ಯಾಸ ಮಾಡಿಕೊಂಡಿದ್ದು, ಅದನ್ನು ಬಿಡುವಂತೆ ಮನವೊಲಿಸಲು ನನ್ನ ಬಳಿ ಬಂದಿರಬಹುದು ಅಂದುಕೊಂಡೆ.

'ನೋಡಿ ಸರ್. ಕಳೆದ ಒಂದು ತಿಂಗಳಿನಿಂದ ಈ ಖಾಲಿ ಡಬ್ಬ ಹಿಡ್ಕೊಂಡು ತಿರುಗ್ತಾ ಇದಾನೆ. ಓದಿಲ್ಲ ಬರವಣಿಗೆ ಇಲ್ಲ... ಅದೇನೋ ಪ್ರಾಜೆಕ್ಟ್ ಅಂತೆ... ಇಂಥ ಖಾಲಿ ಡಬ್ಬದಲ್ಲಿ ಅದೇನು ಪ್ರಾಜೆಕ್ಟ್ ಇರ್ತದೆ ಸಾರ್, ನೀವೇ ಕೇಳಿ' ಎಂದರು ಶ್ರೀನಿವಾಸಣ್ಣ.

'ಆಯಿತು ಇರಪ್ಪ, ಅವನೇನು ಹೇಳ್ತಾನೆ ಕೇಳೋಣ' ಅಂದೆ.

ಹುಡುಗ ರೋಹಿತ್ 'ಸರ್, ಕಳೆದ ತಿಂಗಳು ನಮ್ಮ ಸ್ಕೂಲ್‌ಗೆ ಸೈಂಟಿಸ್ಟ್ ಬಂದಿದ್ರು. ಇದ್ರಿಂದ ಸ್ಯಾಟಲೈಟ್ ಮಾಡಬಹುದು ಅಂತ ತೋರಿಸಿದ್ರು, ನಾನೂ ಅದನ್ನೇ ಟ್ರೈ ಮಾಡ್ತಾ ಇದ್ದೀನಿ' ಅಂದ.

ಅವನ ಮಾತಿನಿಂದ ನನಗೆ ತುಂಬಾ ಖುಷಿಯಾಯಿತು.

'ಶ್ರೀನಿವಾಸಣ್ಣ, ಇದಕ್ಕೆ ಕ್ಯಾನ್ ಸ್ಯಾಟ್ ಅಂತಾರೆ. ಅಂದ್ರೆ ಕೂಲ್ ಡ್ರಿಂಕ್ಸ್ ಡಬ್ಬಿ ಉಪಯೋಗಿಸಿ ಉಪಗ್ರಹ ತಯಾರಿಸಬಹುದು. ಇದು ಸೈನ್ಸ್ ಪ್ರಾಜೆಕ್ಟೇ, ಯೋಚನೆ ಮಾಡಬೇಡಿ. ತುಂಬಾ ಒಳ್ಳೆ ವಿಷಯ. ನಿಮ್ಮ ಮಗನೇನೂ ತಪ್ಪು ಮಾಡ್ತಾ ಇಲ್ಲ' ಅಂದೆ.

ಸ್ವಲ್ಪ ಗೆಲುವಾದಂತೆ ಕಂಡ ರೋಹಿತ್ – 'ಸರ್, ಪುನೀತ್ ರಾಜ್‌ಕುಮಾರ್ ಸ್ಯಾಟಲೈಟ್ ನಂ ಸ್ಕೂಲ್‌ನಲ್ಲೇ ತಯಾರಾಗ್ತಾ ಇದೆ. ಅದನ್ನು ಕಲಿಸಲು ಬಂದ ಸೈಂಟಿಸ್ಟ್ ಇದನ್ನೂ ಮಾಡಬಹುದು ಅಂತ ಹೇಳ್ತಾ ಇದ್ರು. ನಾನೊಬ್ಬನೇ ಅಲ್ಲ, ನಮ್ಮ ಫ್ರೆಂಡ್ಸ್ ಕೂಡ ಮಾಡ್ತಾ ಇದಾರೆ. ಅದಕ್ಕೇ ನಾನೂ ಮಾಡ್ತಾ ಇದೀನಿ. ಕೆಲವು ವಿಷಯ ಗೊತ್ತಾಗಿಲ್ಲ, ನೀವು ಹೆಲ್ಪ್ ಮಾಡ್ತೀರಾ' ಅಂದ.

'ಆಯಿತು. ನಿನಗೇನೇನು ಬೇಕು ಎಂದು ಲಿಸ್ಟ್ ಮಾಡಿಕೊಂಡು ಬಾ, ನಮ್ಮ ಲ್ಯಾಬ್‌ನಲ್ಲಿ ಟ್ರೈ ಮಾಡೋಣ' ಅಂದೆ.

ರಾಜ್ಯ ಸರ್ಕಾರ ಪುನೀತ್ ರಾಜ್‌ಕುಮಾರ್ ಹೆಸರಿನ ಉಪಗ್ರಹ ಹಾರಿಸಲು